**ಸಂಬಾರ ಪದಾರ್ಥಗಳ ಉಪಕರ ಅಧಿನಿಯಮ, 1986**

(1986ರ ಅಧಿನಿಯಮ ಸಂಖ್ಯೆ 11)

**[24-9-2001 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 21ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 45 ಮತ್ತು 46 ನೇ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಉಪಕರವನ್ನು ವಿಧಿಸುವುದು ಮತ್ತು ವಸೂಲು ಮಾಡುವುದು
4. ವರದಿಗಳು ಮತ್ತು ವಿವರ ಪಟ್ಟಿಕೆಗಳನ್ನು ತರಿಸಿಕೊಳ್ಳುವ ಅಧಿಕಾರ
5. ನಿಯಮ ರಚನಾಧಿಕಾರ.

# ಸಂಬಾರ ಪದಾರ್ಥಗಳ ಉಪಕರ ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 11)

[20ನೇ ಮಾರ್ಚ್, 1986]

ಸಂಬಾರ ಪದಾರ್ಥಗಳ ರಫ್ತಿನ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಗಳಿಗಾಗಿ, ರಫ್ತು ಮಾಡಲಾಗುವ ಎಲ್ಲ ಸಂಬಾರ ಪದಾರ್ಥಗಳ ಮೇಲೆ ಉಪಕರವನ್ನು ವಿಧಿಸಲು ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಸಂಬಾರ ಪದಾರ್ಥಗಳ ಉಪಕರ ಅಧಿನಿಯಮ, 1986 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕುದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ, ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986ರ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಸಂಬಾರ ಪದಾರ್ಥಗಳ ಮಂಡಲಿ;

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಸಿ) "ಸಂಬಾರ ಪದಾರ್ಥಗಳು" ಎಂದರೆ, ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986ರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸಂಬಾರ ಪದಾರ್ಥಗಳು.

**3. ಉಪಕರವನ್ನು ವಿಧಿಸುವುದು ಮತ್ತು ವಸೂಲು ಮಾಡುವುದು.**- (1) ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮ, 1986ರ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ರಫ್ತು ಮಾಡಲಾಗುವ ಎಲ್ಲ ಸಂಬಾರ ಪದಾರ್ಥಗಳ ಮೇಲೆ ಶೇಕಡಾ ಐದನ್ನು ಮೀರದಂತಹ ದರದಲ್ಲಿ ಮೌಲ್ಯಾನುಸಾರ ಸೀಮಾ ಸುಂಕವನ್ನು ಉಪಕರದ ರೂಪದಲ್ಲಿ ವಿಧಿಸತಕ್ಕುದು ಮತ್ತು ವಸೂಲಿ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾಗುವ ಸೀಮಾ ಸುಂಕವು, ಸೀಮಾ ಸುಂಕ ಅಧಿನಿಯಮ, 1962 (1962ರ 52) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸಂಬಾರ ಪದಾರ್ಥಗಳ ಮೇಲೆ ವಿಧಿಸಲಾಗುವ ಸೀಮಾ ಸುಂಕದ ಜೊತೆಗೆ ಹೆಚ್ಚಿಗೆಯಾಗಿ ಇರತಕ್ಕುದು.

(3) ಸೀಮಾ ಸುಂಕ ಅಧಿನಿಯಮ, 1962 (1962ರ 52) ಮತ್ತು ಸುಂಕದ ಮರುಪಾವತಿಗೆ ಮತ್ತು ವಿನಾಯಿತಿಗೆ ಸಂಬಂಧಪಡಬಹುದಾದವುಗಳ ನ್ನೊಳಗೊಂಡು ಆ ಅಧಿನಿಯಮದ

ಉಪಬಂಧಗಳು ಹಾಗೂ ಆ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳು ಮತ್ತು ವಿನಿಯಮಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಆ ಅಧಿನಿಯಮದ ಮೇರೆಗೆ ಸಂಬಾರ ಪದಾರ್ಥಗಳ ಮೇಲೆ ಸೀಮಾ ಸುಂಕವನ್ನು ವಿಧಿಸುವ ಮತ್ತು ವಸೂಲು ಮಾಡುವ ಸಂಬಂಧದಲ್ಲಿ ಅನ್ವಯಿಸುವಂತೆಯೇ ಸದರಿ ಸೀಮಾ ಸುಂಕವನ್ನು ವಿಧಿಸುವ ಮತ್ತು ವಸೂಲು ಮಾಡುವ ಸಂಬಂಧದಲ್ಲಿಯೂ ಅನ್ವಯಿಸತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ವಿಧಿಸಿದ ಸೀಮಾ ಸುಂಕದ ಉತ್ಪತ್ತಿಗಳನ್ನು, ಮೊದಲು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕುದು ಮತ್ತು ಸಂಸತ್ತು, ಈ ಬಗ್ಗೆ ಕಾನೂನಿನ ಮೂಲಕ ಮಾಡಿದ ಧನವಿನಿಯೋಗದ ಮೂಲಕ ಉಪಬಂಧಿಸಿದರೆ, ಕೇಂದ್ರ ಸರ್ಕಾರವು ಅಂಥ ಉತ್ಪತ್ತಿಗಳಿಂದ (ವಸೂಲಿಯ ವೆಚ್ಚವನ್ನು ಕಳೆದ ತರುವಾಯ) 1986ರ ಸಂಬಾರ ಪದಾರ್ಥಗಳ ಮಂಡಲಿ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲು ಅದು ಸೂಕ್ತವೆಂದು ಯೋಚಿಸಬಹುದಾದಷ್ಟು ಹಣದ ಮೊತ್ತವನ್ನು ಕಾಲಕಾಲಕ್ಕೆ ಆ ಮಂಡಲಿಗೆ ಸಂದಾಯ ಮಾಡಬಹುದು.

**4. ವರದಿಗಳು ಮತ್ತು ವಿವರಪಟ್ಟಿಕೆಗಳನ್ನು ತರಿಸಿಕೊಳ್ಳುವ ಅಧಿಕಾರ.–** ಮಂಡಲಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಬಹುದಾದಂಥ ಅಂಕಿ ಅಂಶಗಳನ್ನು ಮತ್ತು ಇತರ ಮಾಹಿತಿಯನ್ನು ಅಂತಹ ನಮೂನೆಯಲ್ಲಿ ಮತ್ತು ಅಂತಹ ಅವಧಿಯೊಳಗೆ ಒದಗಿಸಲು ಸಂಬಾರ ಪದಾರ್ಥಗಳ ಯಾವನೇ ರಫ್ತುದಾರನನ್ನು ಅಗತ್ಯಪಡಿಸಬಹುದು.

**5. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ 4ನೇ ಪ್ರಕರಣದ ಮೇರೆಗೆ ಮಂಡಲಿಗೆ ಅಂಕಿ ಅಂಶಗಳನ್ನು ಮತ್ತು ಇತರ ಮಾಹಿತಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಅವಧಿಯೊಳಗೆ ಒದಗಿಸಬಹುದು ಎಂಬ ಬಗ್ಗೆ ಅಂಥ ನಿಯಮಗಳಲ್ಲಿ ಉಪಬಂಧವನ್ನು ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

* * * *